***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 23.04.2026***

***<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>***

*1. ನನಗೆ ಒಬ್ಬನೇ ಮಗನಿರುತ್ತಾನೆ, ಆತನ ಹೆಸರು ಬಿ ಎಸ್ ಲೊಕೇಶ. ಟಿ ಎಸ್ ಛತ್ರ ಮತ್ತು ಬಳೇ ಅತ್ತಿಗುಪ್ಪೆ ಗ್ರಾಮಗಳು ಅಕ್ಕಪಕ್ಕದಲ್ಲಿರುತ್ತವೆ ಎಂದರೆ ಸರಿ. ನನ್ನ ಮಗ ಬದುಕಿದ್ದ ಸಮಯದಲ್ಲಿ ಎಲ್ಲರೊಡನೆ ವಿಶ್ವಾಸದಿಂದ ಇದ್ದನು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ವ್ಯವಹಾರಗಳನ್ನು ಅವನ ಸ್ವಂತವಾಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸೇರಿದ ವ್ಯವಸಾಯದ ಜಮೀನುಗಳಿರುತ್ತವೆ ಎಂದರೆ ಸರಿ. ವ್ಯವಸಾಯವನ್ನು ನನ್ನ ಮಗನೂ ಸಹಾ ಸೇರಿಕೊಂಡು ಮಾಡುತ್ತಿದ್ದನು ಎಂದರೆ ಸರಿಯಲ್ಲ. ನನಗೆ ಒಬ್ಬನೇ ಮಗನಾಗಿದ್ದ ಕಾರಣ ಆತನು ನನಗೆ ವ್ಯವಸಾಯದಲ್ಲಿ ಸಹಾಯ ಮಾಡುತ್ತಿದ್ದರೂ ಸಹಾ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

2. *ವಾದಿಯ ಪರಿಚಯ ನನಗಿರುತ್ತದೆ. ನನ್ನ ಮಗ ಬದುಕಿದ್ದ ಸಮಯದಲ್ಲಿ ಚಿಕ್ಕ ಟೀ ಪೆಟ್ಟಿ ಅಂಗಡಿಯನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದನು ಎಂದರೆ ಸರಿ. ವಾದಿಗೆ ಟೀ ಅಂಗಡಿ ಮತ್ತು ವ್ಯವಸಾಯದ ಆದಾಯಗಳನ್ನು ಬಿಟ್ಟರೇ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ವ್ಯವಸಾಯವನ್ನು ನಾನೇ ಮಾಡುತ್ತಿದ್ದೆನು ಆತ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ನನ್ನ ಮಗನ*

ಹೆಂಡತಿಯಾಗಿರುತ್ತಾರೆ, ಅವರ ಮದುವೆಯ ನಂತರ ನನ್ನ ಮಗ ಸೊಸೆ ಮತ್ತು ಮಕ್ಕಳ ವ್ಯವಹಾರಗಳನ್ನು ಅವರೇ ಪ್ರತ್ಯೇಕವಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಮಗನಿಗೆ ಕುಟುಂಬದ ನಿರ್ವಹಣೆ ಮಾಡಲು ಸಾಕಷ್ಟು ಹಣಕಾಸಿನ ಅಗತ್ಯ ಇತ್ತು ಎಂದರೆ ಸಾಕ್ಷಿಯು ನಾನು ನೀಡುತ್ತಿದ್ದೆನು ಎಂದು ನುಡಿಯುತ್ತಾರೆ.

3. ನನ್ನ ಮಗ ಮೃತ ಬಿ .ಎಸ್ ಲೊಕೇಶ ರವರು ದಿನಾಂಕ 18-05-2016 ರಲ್ಲಿ ವ್ಯವಸಾಯಕ್ಕೆ ಹಸುಗಳನ್ನು ಖರೀದಿ ಮಾಡಲು ವಾದಿಯಿಂದ ರೂ 20,000/- ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ಆತ ವ್ಯವಸಾಯವೇ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 23-12-2017 ರಂದು ವಾದಿಯಿಂದ ನನಗೆ ನೋಟಿಸ್ ಜಾರಿಯಾಗಿರುತ್ತದೆ ಎಂದರೆ ಸರಿ. ಸದರಿ ನೋಟಿಸ್ ನ ಸಂಗತಿಗಳು ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ನೋಟಿಸ್ ಬಂದ ನಂತರ ನಾನು ವಾದಿಯನ್ನು ಹೋಗಿ ಭೇಟಿಯಾಗಿ ನೋಟಿಸ್ ಯಾಕೆ ನೀಡಿರುವುದು ಎಂದು ಕೇಳಿರುತ್ತೇನೆ, ಆತ ದಾವೆಯನ್ನು ಸಲ್ಲಿಸುವುದಿಲ್ಲ ಎಂದು ಹೇಳಿರುತ್ತಾರೆ. ನಾನು ವಾದಿಗೆ ಯಾವುದೇ ಪ್ರತ್ಯುತ್ತರ ನೋಟಿಸ್ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಆತನನ್ನು ಭೇಟಿಯಾದ ನಂತರ ನಾನು ಯಾವುದೇ ವಕೀಲರನ್ನು ಭೇಟಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯನ್ನು ಭೇಟಿಯಾದ ಸಂದರ್ಭದಲ್ಲಿ ವಾದಿಯು ನನಗೆ ನನ್ನ ಮಗ ಮಾಡಿದ ಸಾಲವನ್ನು ನೀವು ಮರಳಿ ನೀಡಬೇಕೆಂದು ಹೇಳಿದ್ದರು ಎಂದರೆ

ಸರಿಯಲ್ಲ. ನೋಟಿಸ್ ಜಾರಿ ಮಾಡುವ ಮೊದಲು ಸಹಾ ವಾದಿ ನನ್ನನ್ನು ಭೇಟಿ ಯಾಗಿ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಮಗನ ಸಹಿಯನ್ನು ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ. ನನ್ನ ಮಗ ದಿನಾಂಕ 27-09-2017 ರಂದು ಹೃದಯಾಘಾತದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ಮಗ ಬದುಕಿದ್ದ ಸಮಯದಲ್ಲಿ ಹಸುಗಳ ಖರೀದಿಗಾಗಿ ರೂ 20,000/- ಸಾಲವನ್ನು ಪಡೆದಿರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**